# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 05–02–2026 ರಂದು ಅಪರಾಹ್ನ 4.00 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿ.**

**<u>ಉಪಸ್ಥಿತರು:</u>**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್. ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | – ಸದಸ್ಯರು |
| 3. | ಪ್ರೊ. ಎಸ್.ಜೆ. ಮಂಜುನಾಥ್ | – ಸದಸ್ಯರು |
| 4. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 5. | ಶ್ರೀ ಕೆ. ಗೋಕುಲ್ ಗೋವರ್ಧನ್ | – ಸದಸ್ಯರು |
| 6. | ಡಾ. ಹೆಚ್.ಎಂ. ಮಹೇಶ | – ಸದಸ್ಯರು |
| 7. | ಡಾ. ಎಂ. ಪ್ರಭು | – ಸದಸ್ಯರು |
| 8. | ಡಾ. ಪ್ರಿಯ ಮ್ಯಾಥ್ಯೂ | – ಸದಸ್ಯರು |
| 9. | ಡಾ. ಕೆಂಪೇಗೌಡ ಬಿ.ಕೆ. | – ಸದಸ್ಯರು |
| 10. | ಶ್ರೀ ಮಹದೇಶು | – ಸದಸ್ಯರು |
| 11. | ಶ್ರೀ ನಾಗರಾಜು ಸಿ. | – ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 13. | ಡಾ. ಶಿಲ್ಪ ಜೆ. | – ಸದಸ್ಯರು |
| 14. | ಡಾ. ನಟರಾಜು ಹೆಚ್.ಎಸ್. | – ಸದಸ್ಯರು |
| 15. | ಶ್ರೀ ಎಂ. ಶಂಕರ | – ಸದಸ್ಯರು |
| 16. | ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) | – ಸದಸ್ಯರು |
| 17. | ಶ್ರೀಮತಿ ರೇಖಾ ಕೆ ಎಸ್, ಕೆ.ಎಸ್.ಎ.ಎಸ್, ಹಣಕಾಸು ಅಧಿಕಾರಿಗಳು | –ವಿಶೇಷ ಆಹ್ವಾನಿತರು |
| 18. | ಶ್ರೀಮತಿ ಸವಿತಾ ಎಂ ಕೆ, ಕೆ.ಎ.ಎಸ್, ಕುಲಸಚಿವರು | –ಸದಸ್ಯ ಕಾರ್ಯದರ್ಶಿ |

**<u>ಅನುಪಸ್ಥಿತರು</u>**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು
   ಇವರ ಪರವಾಗಿ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಕುಲಪತಿಯವರ ಅಪ್ಪಣೆಯ ಮೇರೆಗೆ ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

ನಂತರ ಮಾನ್ಯ ಕುಲಪತಿಯವರು ಡಾ. ಕೆ.ಮಂಟೇಲಿಂಗು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಬೇಕೆಂದು ಸೂಚಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2026/2.1 | 2026–27ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ಸಲ್ಲಿಸಿರುವ ಸಂಯೋಜನ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |

ಡಾ. ಕೆ. ಮಂಟೇಲಿಂಗುರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ 2026–27ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳು/ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್‌ಆನ್ ಕೋರ್ಸುಗಳನ್ನು ಮುಂದುವರಿಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡಿ ಭೌತಿಕವಾಗಿ ಪರಿಶೀಲಿಸಿ ಸಲ್ಲಿಸಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಭೆಯಲ್ಲಿ ಈ ಕೆಳಕಂಡಂತೆ ಮಂಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಾಲಿ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59ರ ಮೇರೆಗೆ ಕೆಳಕಂಡಂತೆ ಕಾಲೇಜುವಾರು/ಶಿಕ್ಷಣ ಸಂಸ್ಥೆಗಳು ಸಂಯೋಜನೆಯನ್ನು ಮುಂದುವರೆಸಲು, ಹೊಸದಾಗಿ ಸಂಯೋಜನೆ ನೀಡಲು, ಪ್ರವೇಶಾತಿ ಹೆಚ್ಚಳ ಮಾಡಲು, ಶಾಶ್ವತ ಸಂಯೋಜನೆ ನೀಡಲು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಹಾಗೂ ಸ್ವಾಯತ್ತ ಕಾಲೇಜುಗಳನ್ನು ಹೊರತುಪಡಿಸಿ ಸ್ಥಳೀಯ ವಿಚಾರಣಾ ಸಮಿತಿ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರವು ಈ ಕೆಳಕಂಡಂತಿರುತ್ತದೆ.

**I. 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 80**

| ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು | | | |
|---|---|---|---|
| **ಕ್ರಮ ಸಂಖ್ಯೆ** | **ಕಾಲೇಜಿನ ಹೆಸರು ಮತ್ತು ಸ್ಥಳ** | **ಶಾಶ್ವತ ಸಂಯೋಜನೆ ಹೊಂದಿರುವ ಕೋರ್ಸುಗಳು** | **ತಾತ್ಕಾಲಿಕ ಸಂಯೋಜನೆ ಮುಂದುವರಿಕೆ ನೀಡಿರುವ ಕೋರ್ಸ್‌ಗಳ ವಿವರ** |
| 1. | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು | B.A. | B.A.,BCA, PG.-M.A. – Economics, Sociology, English, Kannada, Political Science, History, M.Sc-geography, Psychology |
| 2. | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು | B.Com. | BBA, B.Com. BCA P.G –M.Com, MBA |

| | | | | | | |
|---|---|---|---|---|---|---|
| | | 3. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | B.A., B.Sc., B.Com, BBA | B.A., B.Sc., B.Com, BCA | |
| | | 4. | ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, BCA | |
| | | 5. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು | B.A., B.Com BBA | B.A., B.Sc., B.Com., BBA, BCA P.G.- M.A.- Kannada | |
| | | 6. | ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು, ಮೈಸೂರು, | B.FA | M.FA | |
| | | 7. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು | - | B.A, BBA., B.Com, B.Sc, BCA, | |
| | | 8. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು | B.A., B.Sc., BBA, B.Com | B.Sc., B.Com. | |
| | | 9. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | B.A., B.Com., BBA., B.Sc | B.A., B.Com., B.Sc, BCA P.G.- MSW, M.A- Kannada, M.Com | |
| | | 10. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | - | B.A., B.Com., BBA., B.Sc P.G.-M.Com, M.Sc- Chemistry | |
| | | 11. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ | - | B.A., BBA., B.Com., B.Sc | |
| | | 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ | B.A. | B.A., BBA., B.Com, B.Sc,BCA | |
| | | 13. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು | - | B.A., BBA., B.Com | |
| | | 14. | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | B.A., B.Com. | B.A., B.Sc., BBA, B.Com. BCA P.G.-M.A- Economics, History, Political Science, Kannada, M.Com, M.Sc- Mathematics, | |
| | | 15. | ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು | B.A., B.Com | B.A., B.Sc., B.Com., BBA, BCA | |
| | | 16. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು ಹುಣಸೂರು ತಾ. | - | B.A., B.Com., BBA | |
| | | 17. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ | B.A., B.Com | B.A., BBA | |
| | | 18. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು | BA., B.Com, B.Sc | B.A. B.Sc., BBA | |
| | | 19. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ | - | B.A. B.Sc., B.Com., BBA | |
| | | 20. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ | B.A. B.Com., BBA | B.A., B.Sc., B.Com, BCA P.G.-M.Com | |
| | | 21. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭೈರಾಪುರ ಗ್ರಾಮ, ಟಿ.ನರಸೀಪುರ ತಾ | - | B.A., BBA B.Com., BSW, B.Sc, BCA | |
| | | 22. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು, ಟಿ.ನರಸೀಪುರ ತಾ. | - | B.A., B.Com., BBA | |

| | | | | | |
|---|---|---|---|---|---|
| | 23. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ | B.A., B.Com. | B.A., BBA B.Com., BCA | |
| | 24. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟದಪುರ, ಪಿರಿಯಾಪಟ್ಟಣ ತಾ. | - | B.A., B.C[illegible] | |
| | | ಮೈಸೂರು ಜಿಲ್ಲೆ ಖಾಸಗಿ ಅನುದಾನಿತ ಕಾಲೇಜುಗಳು | | | |
| | 25. | ಶಾರದಾ ವಿಲಾಸ ಕಾಲೇಜು, ಮೈಸೂರು | B.Sc. | B.Sc. B.Com., BBA, BCA<br>P.G.-M.Com, M.Sc-Chemistry | |
| | 26. | ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.A., B.Com, BBA | B.A. | |
| | 27. | ಡಿ. ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು | B.Com. | BA., BBA<br>P.G.-M.Com | |
| | 28. | ಟೆರೇಷಿಯನ್ ಕಾಲೇಜು, ಮೈಸೂರು | B.A., B.Sc., B.Com. | B.A., B.Sc., BBA, B.Com, BCA<br>P.G.-M.Com, M.Sc-Psychology, Biotechnology, Botany | |
| | 29. | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು | B.A, B.Com. BBA | B.Com., BCA<br>P.G.-M.Com,MCA | |
| | 30. | ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ನಂಜನಗೂಡು | B.A., B.Sc., B.Com. | B.Sc., B.Com.,BBA, BCA | |
| | 31. | ವಿದ್ಯೋದಯ ಕಲಾ ಮತ್ತು ವಾಣಿಜ್ಯ ಕಾಲೇಜು, ಟಿ. ನರಸೀಪುರ | B.A., B.Com | - | |
| | 32. | ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು | B.A.,B.Com | - | |
| | 33. | ಶ್ರೀ ಚನ್ನಕೇಶವ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ, ಕೆ.ಆರ್.ನಗರ ತಾ., ಮೈಸೂರು ಜಿಲ್ಲೆ | - | BA | |
| | | ಮೈಸೂರು ಜಿಲ್ಲೆ ಖಾಸಗಿ ಅನುದಾನರಹಿತ ಕಾಲೇಜುಗಳು | | | |
| | 34. | ಮಲ್ಲಮ್ಮ ಮರಿಮಲ್ಲಪ್ಪ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮೈಸೂರು | - | B.Sc., BBA | |
| | 35. | ಜಿ.ಎಸ್.ಎಸ್.ಎಸ್. ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು | BBA | B.Com., BCA | |
| | 36. | ಡಿ. ಬನುಮಯ್ಯ ಸಂಜೆ ಕಾಲೇಜು, ಮೈಸೂರು | - | B.Com | |
| | 37. | ಮೈಸೂರು ಮಕ್ಕಳಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಕಾಲೇಜು, ಮೈಸೂರು | B.Sc., BBA., BCA, B.Com. | BCA<br>P.G.- M.Com | |
| | 38. | ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Sc, BCA, B.Com, BBA | |
| | 39. | ಎಂ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA., B.Com | |
| | 40. | ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.A | B.Com., | |
| | 41. | ಟಿ.ಟಿ.ಎಲ್. ಕಾಲೇಜ್ ಆಫ್ ಬಿಸಿನೆಸ್ | - | BBA., B.Com<br>P.G.- M.Com | |

| | | | | | | |
|---|---|---|---|---|---|---|
| | | | ಮ್ಯಾನೇಜ್‌ಮೆಂಟ್, ಮೈಸೂರು | | | |
| | | 42. | ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA | |
| | | 43. | ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, BCA, B.Com.<br>P.G.- MSW | |
| | | 44. | ಶ್ರೀ ವಾಣಿವಿಲಾಸ ಅರಸು ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA,<br>BCA | |
| | | 45. | ಶ್ರೀ ಲಕ್ಷ್ಮೀಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | B.Sc., B.Com., BBA | |
| | | 46. | ಬಿಷಪ್ ನಾರ್ಮನ್ ಕಾರ್ ಸಾರ್ಜೆಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com. | |
| | | 47. | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ಮಾನಂದವಾಡಿ, ಮೈಸೂರು | BBA, BCA,<br>B.Com | BBA, BCA, B.Com.<br>P.G.-M.Com | |
| | | 48. | ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | BBA, B.Com, BCA | |
| | | 49. | ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com | |
| | | 50. | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು | - | B.Sc. BBA, B.Com, BCA | |
| | | 51. | ಮೈಸೂರು ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಆರ್ಟ್ಸ್, ಮೇಟಗಳ್ಳಿ, ಮೈಸೂರು | - | BBA, B.Com, BCA | |
| | | 52. | ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | B.Com, BCA | |
| | | 53. | ಸೇಫಿಯಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com., BCA | |
| | | 54. | ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com | |
| | | 55. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, B.Sc., BCA, BBA | |
| | | 56. | ಹಿಂದೂಸ್ತಾನ್ ಕಾಲೇಜು, ಮೈಸೂರು | - | B.Com, BCA<br>P.G-M.Com | |
| | | 57. | ಶೇಷಾದ್ರಿಪುರಂ ಪದವಿ ಕಾಲೇಜು, ಹೆಬ್ಬಾಳ್, ಮೈಸೂರು | B.Com, BBA,<br>BCA | BCA,<br>P.G-MBA | |
| | | 58. | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.C.A., BBA, B.Com. | |
| | | 59. | ಸೆಂಟ್ ಜೋಸೆಫ್ ಮಹಿಳಾ ಕಾಲೇಜು, ರಮ್ಮನಹಳ್ಳಿ, ಮೈಸೂರು | - | BBA, B.Com., BCA, B.Sc | |
| | | 60. | ಜೀನಿಯಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು | | B.Com, BCA | |
| | | 61. | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | | B.Com, BBA, B.A., B.Sc.,<br>BCA | |
| | | 62. | ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ | - | B.A B.Com | |
| | | 63. | ಶ್ರೀ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜು, | - | B.A, B.Com | |

| | | | |
|---|---|---|---|
| | ಹೆಚ್.ಡಿ. ಕೋಟೆ | | |
| 64. | ಸಿಟಿಜನ್ಸ್ ವಿಜ್ಞಾನ, ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಪ್ರಥಮ ದರ್ಜೆ ಕಾಲೇಜು, ನಂಜನಗೂಡು | - | B.Com, BBA |
| 65. | ಪಿ.ಆರ್.ಎಂ. ವಿಜಯ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ | - | B.A B.Com |
| 66. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಬನ್ನೂರು | - | B.A B.Com |
| 67. | ಭಾರತ ಮಾತಾ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಪಿರಿಯಾಪಟ್ಟಣ ತಾ., ಮೈಸೂರು ಜಿಲ್ಲೆ | - | B.Com, BBA, BCA |
| 68. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಅಬ್ಬೂರು, | - | B.A B.Com |
| 69. | ವಿ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜು, ಸಾಧನಾಪುರ, ರತ್ನಪುರಿ ಕಾಲೋನಿ, ಹುಣಸೂರು ತಾ. | - | B.A |
| 70. | ಜ್ಞಾನಧಾರಾ ಪ್ರಥಮ ದರ್ಜೆ ಕಾಲೇಜು, ಕಾಫಿವರ್ಕ್ಸ್ ಆವರಣ, ಹುಣಸೂರು | - | BA., B.Com, BBA, BCA |
| 71. | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | - | B.Com, BCA., BA, B.Sc |
| 72. | ಕಾವೇರಿ ಕಾಲೇಜ್ ಆಫ್ ಲೈಫ್‌ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, BCA<br>P.G-MBA, MCA |
| 73. | ದೇವಲಾ ಮಹರ್ಷಿ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA |
| 74. | ದಕ್ಷ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA<br>P.G- MBA, MCA |
| 75. | ಎಂ.ಐ.ಟಿ., ಪ್ರಥಮ ದರ್ಜೆ ಕಾಲೇಜು ಕೆಸರೆ ಕಸಬಾ ಹೋ., ಮೈಸೂರು. | - | B.Com, BCA |
| 76. | ವಿಕ್ಟರಿ ಪ್ರಥಮ ದರ್ಜೆ ಕಾಲೇಜು,<br>37/1, ಅಬುಲ್ ಕಲಾಂ ಅಜಾದ ರಸ್ತೆ,<br>ಎನ್.ಆರ್. ಮೊಹಲ್ಲಾ, ಮೈಸೂರು–570007 | - | B.Com, BCA |
| 77. | ಪರಿವರ್ತನ ಬ್ಯುಸಿನೆಸ್ ಸ್ಕೂಲ್,<br>ಕೆ.ಆರ್.ಎಸ್. ರೋಡ್, ಮೈಸೂರು | - | B.Com, BBA, BCA<br>P.G.-MBA, MCA |
| | **ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜು** | | |
| 78. | ವಿದ್ಯಾ ವಿಕಾಸ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿ, ಮೈಸೂರು | - | BBA<br>(Tourism and Hospitality)<br>BBA<br>(Tourism and Travels) |
| | **ಕೇಂದ್ರ ಸರ್ಕಾರದ ವಾಕ್ ಮತ್ತು ಶ್ರವಣ ಸಂಸ್ಥೆ** | | |
| 79. | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | - | B.A.SLP, B.Ed.Spl.Ed. (H.I.)-<br>M.Ed.SPL.Ed(HI)<br>M.Sc- Speech Language Pathology, Audiology |

| | | | | |
|---|---|---|---|---|
| | | | | PG Diploma in Auditory verbal therapy |
| | ಖಾಸಗಿ ವಾಕ್ ಮತ್ತು ಶ್ರವಣ ಸಂಸ್ಥೆ | | | |
| 80. | ಜೆ.ಎಸ್.ಎಸ್. ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | - | | B.A.SLP<br>P.G-M.Sc- SLP, Audiology |

**II. 2026-27ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 15**

| | ಶಿಕ್ಷಣ ಕಾಲೇಜುಗಳು | | |
|---|---|---|---|
| 1. | ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ , ಮೈಸೂರು | | B.Ed. |
| 2. | ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಮೈಸೂರು | | B.Ed., B.A.B.Ed., B.Sc.B.Ed<br>M.Ed, M.Sc.Ed-mathematics<br>M.Sc.Ed- Chemistry,<br>M.Sc.Ed- Physics. |
| 3. | ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರಮಲ್ ಸೋಮಾನಿ ಕಾಲೇಜ್ , ಮೈಸೂರು. | | B.Ed. |
| 4. | ಶಾರದ ವಿಲಾಸ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 5. | ಸೇಂಟ್ ಜೋಸಫ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 6. | ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 7. | ವಿದ್ಯಾವಿಕಾಸ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 8. | ಶ್ರೀ ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 9. | ಬಿ.ಜಿ.ಎಸ್. ಬಿ.ಎಡ್. ಕಾಲೇಜು, ಕುವೆಂಪುನಗರ, ಮೈಸೂರು | | B.Ed. |
| 10. | ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ, ಮೈಸೂರು | | B.Ed. |
| 11. | ಶ್ರೀ ಮಹಾವೀರ ಕಾಲೇಜ್ ಆಫ್ ಎಜುಕೇಷನ್, ಹುಣಸೂರು. | | B.Ed. |
| 12. | ಜೆ.ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಸುತ್ತೂರು | | B.Ed. |
| 13. | ಮಹಾತ್ಮ ಗಾಂಧಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | | B.Ed. |
| 14. | ಮೌಲಾನಾ ಅಜ್ಹಾದ್ ಶಿಕ್ಷಣ ಕಾಲೇಜು, ಮೈಸೂರು | | B.Ed. |
| 15. | ಯಡತೊರೆ ಶಿಕ್ಷಣ ಕಾಲೇಜು, ಕೆ.ಆರ್. ನಗರ | | B.Ed. |

**III. 2026-27ನೇ ಶೈಕ್ಷಣಿಕ ಸಾಲಿನ ಹೊಸ ಪ್ರಥಮ ದರ್ಜೆ ಕಾಲೇಜುಗಳ ಪ್ರಸ್ತಾವನೆಯ ವಿವರ: ಯಾವುದೂ**

ಇಲ್ಲ

**IV. 2026-27ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ರದ್ದುಪಡಿಸಲು ಕೋರಿರುವ/ ಕೋರ್ಸುಗಳನ್ನು ಸ್ಥಗಿತಗೊಳಿಸಿರುವ ಪ್ರಥಮ ದರ್ಜೆ ಕಾಲೇಜುಗಳ ವಿವರ.**

| ಕ್ರ.ಸಂ | ಕಾಲೇಜಿನ ಹೆಸರು | ಸಂಯೋಜನೆ/ಕೋರ್ಸುಗಳು |
|---|---|---|
| 1 | ಶ್ರೀಕಾಂತ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | ಸಂಯೋಜನೆಯನ್ನುರದ್ದುಪಡಿಸ<br>ಮನವಿ ಸಲ್ಲಿಸಿರುತ್ತಾರೆ |
| 2 | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | BA-Economics, Political Science,Sociology<br>BA-English,Psychology, Sociology |
| 3 | ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ವಸತಿ ಕಾಲೇಜು, ಮೈಸೂರು | M.Com |

| | | |
|---|---|---|
| 4 | ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು, ಮೈಸೂರು | BBA |
| 5 | ಟೆರೇಷಿಯನ್ ಕಾಲೇಜು, ಮೈಸೂರು | M.A-English |
| 6 | ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಮೈಸೂರು | M.Com |
| 7 | ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು | ಈ ಕೆಳಗೆ ವಿವರಿಸಲಾಗಿದೆ. |

**(ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರು 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ಮುಂದುವರಿಸುವುದಕ್ಕಾಗಲಿ ಅಥವಾ ಕಾಲೇಜನ್ನು ಮುಚ್ಚುವುದಕ್ಕಾಗಲಿ UUCMS ನಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಸಂಯೋಜನಾ ಶುಲ್ಕವನ್ನು ಸಹ ಪಾವತಿಸಿರುವುದಿಲ್ಲ, ಸ್ಥಳೀಯ ವಿಚಾರಣಾ ಸಮಿತಿಯು ಸಹಾ ಕಾಲೇಜಿಗೆ ಭೇಟಿ ನೀಡಿರುವುದಿಲ್ಲ.)**

**V. 2026–27ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು : ಯಾವುದೂ ಇಲ್ಲ**

**VI. 2026–27ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಷರತ್ತುಬದ್ಧ ಶಿಫಾರಸು ಮಾಡಿರುವ ಶಿಕ್ಷಣ ಕಾಲೇಜುಗಳು :ಯಾವುದೂ ಇಲ್ಲ**

**VII. 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಹೊಸ ಸಂಯೋಜನೆಗೆ ಶಿಫಾರಸು ಮಾಡಿರುವ ಕಾಲೇಜುಗಳು: 04**

| ಕ್ರ.ಸಂ | ಕಾಲೇಜಿನ ಹೆಸರು | ಕೋರ್ಸಗಳ ವಿವರ |
|---|---|---|
| 1 | ಸೇಫಿಯಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್, ಮೈಸೂರು, ಮೈಸೂರು | MBA-80, MCA-4 |
| 2 | ಹಿಂದೂಸ್ತಾನ್ ಕಾಲೇಜು, ಮೈಸೂರು | MCA-40 |
| 3 | ಜ್ಞಾನಧಾರಾ ಪ್ರಥಮ ದರ್ಜೆ ಕಾಲೇಜು, ಕಾಫಿವರ್ಕ್ಸ್ ಆವರಣ, ಹುಣಸೂರು | MCA-40 |
| 4 | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | MCA-80 |

**VIII. 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಹೊಸ ಕೋರ್ಸ್/ ವಿಷಯಸಮೂಹ/ಹೊಸ ಭಾಷೆ/ಕಾಲೇಜಿನ ಹೆಸರು ಬದಲಾವಣೆ/ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ವಿವರ:**

**1. ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ:**

| ಕ್ರ. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸಗಳು | ಕಾಂಬಿನೇಷನ್ | ಹಾಲಿ ಇರುವ ಪ್ರವೇಶಾತಿ ಸಂಖ್ಯೆ | ಸಮಿತಿ ಹೆಚ್ಚುವರಿ ಮಂಜೂರ ಮಾಡಿರುವ ಪ್ರವೇಶಾತಿ ಸಂಖ್ಯೆ |
|---|---|---|---|---|---|
| 1. | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | 60 | **60** |
| 2. | ಭಾರತ ಮಾತಾ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಪಿರಿಯಾಪಟ್ಟಣ ತಾ., ಮೈಸೂರು ಜಿಲ್ಲೆ | BCA | - | 60 | **60** |

| | | | | | |
|---|---|---|---|---|---|
| 3. | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | BCA | - | 60 | 60 |

2. **ಹೊಸ ಕೋರ್ಸು/ಕಾಂಬಿನೇಷನ್/ಭಾಷೆ:**

| ಕ್ರ.ಸಂ | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಪ್ರವೇಶಾತಿ ಸಂಖ್ಯೆ |
|---|---|---|---|---|
| 1. | ಟೆರೇಷಿಯನ್ ಕಾಲೇಜು, ಮೈಸೂರು | B.Sc | Criminology and Forensic Science,Computer Science, Biotechnology | 60 |
| 2. | ಹಿಂದೂಸ್ತಾನ್ ಕಾಲೇಜು, ಮೈಸೂರು | BBA | - | 60 |
| 3. | ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ | BCA | - | 120 |
| 4. | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | B.A | Economics,English, Journalism | 60 |
| | | B.Sc | Biotechnology,Botany,Chemistry | 30 |
| | | | Biotechnology,Chemistry,Zoology | 30 |
| | | | Botany,Chemistry,Zoology | 30 |
| 5. | ಕಾವೇರಿ ಕಾಲೇಜ್ ಆಫ್ ಲೈಫ್‌ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | B.Com | - | 60 |

3. **2026–27ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಹೆಸರು ಬದಲಾವಣೆ ಮಾಡಿರುವ ಕಾಲೇಜಿನ ವಿವರ: ಯಾವುದು ಇಲ್ಲ**
4. **ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು: ಯಾವುದು ಇಲ್ಲ.**

**IX. 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚುವರಿ ಪ್ರವೇಶಾತಿ ಸಂಖ್ಯೆಗೆ ಶಿಫಾರಸು ಮಾಡಿರುವ ವಿವರ : ಯಾವುದೂ ಇಲ್ಲ.**

**X. 2026–27ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಹೊಸ ಕೋರ್ಸು/ ವಿಷಯಸಮೂಹ/ಹೊಸ ಭಾಷೆ/ಕಾಲೇಜಿನ ಹೆಸರು ಬದಲಾವಣೆ/ಶಾಶ್ವತ ಸಂಯೋಜನೆಗೆ ಶಿಫಾರಸುಗಳನ್ನು ಸರ್ಕಾರದ ನಿರ್ದೇಶನದಂತೆ ವಿಶ್ವವಿದ್ಯಾನಿಲಯವು ಜಾರಿಗೊಳಿಸಲು ಕ್ರಮ ಕೈಗೊಳಲಾಗುತ್ತದೆ.**

| | |
|---|---|
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59ರ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಗೆ 2026–27ನೇ ಶೈಕ್ಷಣಿಕ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ಸಲ್ಲಿಸಿರುವ ಸಂಯೋಜನಾ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅನುಮೋದಿಸಿದ ಸಿಂಡಿಕೇಟ್ ಸಭೆಯು ರಾಜ್ಯ ಸರ್ಕಾರದ ಅನುಮೋದನೆಗೆ ಕಳುಹಿಸಿ ಕೊಡಲು ತೀರ್ಮಾನಿಸಿತು.** |

| ವಿಶೇಷ ಸಭೆ 2026/2.2 | ಮೈಸೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜುಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ಸಂಯೋಜನ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |
|---|---|

**2026-27ನೇ ಶೈಕ್ಷಣಿಕ ಸಾಲಿಗೆ ಸ್ವಾಯತ್ತ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರ: 05**

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು ಮತ್ತು ಸ್ಥಳ | Programmes offered before granting autonomy | Programmes offered after granting autonomy |
|---|---|---|---|
| 1 | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು | B.Sc, BCA | B.Sc, BCA,<br>P.G.- M.Sc -Physics, Mathematics, Chemistry, Biochemistry, Botany, Microbiology, Applied Zoology, Zoology |
| 2 | ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು-570009 | BA, B.Sc, B.Com, BBA<br>Add on courses Human Resources Management, Foreign Trade, Insurance Management<br>M.A. - Economics | B.Sc, B.Com, BBA, BCA<br>P.G. - M.A. -Economics, M.Com M.Sc.-Chemistry<br>**Add on Courses:**<br>Translation, Proof Reading, Women Studies, Financial Management, Horticulture, Social Welfare, Animation *, Rural Development, Functional English Retail Management, Basic Mathematics, Photo Journalism * Good Governance & E-Governance, Women Health & Hygiene, Functional Hindi Marketing Management, Food & Nutrition Science, Agricultural Marketing Management, Bharathiya Samskruthi Darshana Clinical Laboratory & Technique Yoga, Dance, Music, Auditing, International Financial Reporting Standards (IFRS) Business Journalism & Corporate Communication, Human Rights, Tourism |
| 3 | ಜೆ.ಎಸ್.ಎಸ್. ಕಲಾ, ವಿಜ್ಞಾನ & ವಾಣಿಜ್ಯ ಕಾಲೇಜು, ಬಿ.ಎನ್. ರಸ್ತೆ, ಮೈಸೂರು-570025 | BA, B.Sc, B.Com, BBA<br>P.G.- MSW | BA, B.Sc, BCA, B.com, B.Voc<br>P.G.- M.Sc.- Biotechnology, Biochemistry, Computer Science Physics, Chemistry, Mathematics Zoology, Botany, M.A.-Kannada English, MCA, M.Voc |
| 4 | ಸಂತ ಫಿಲೋಮಿನಾಸ್ ಕಾಲೇಜು, ಬನ್ನಿಮಂಟಪ ಬಡಾವಣೆ. ಮೈಸೂರು-570015 | BA, B.Sc, B.Com, BSW,BBA, BCA<br>P.G.- M.Sc.- Chemistry, MSW | BA, B.Sc, BBA(TH), B.Com, BSW, BBA, BCA, B.Voc<br>P.G.- M.Sc.-Chemistry, MBA, MCA, MSW, MA -Kannada, Hindi, Food Science & Nutrition, M.Com, English, Mass Communication & Journalism, Computer Science, Physics, Economics, Mathematics, Philosophy, Holistic Spirituality, Biochemistry, Psychology, Criminology & Forensic Science |

| | | | |
|---|---|---|---|
| | | | **Diploma courses:** Medical lab technology, Health Care, Tourism, Travel, Hospitality & Management , Bread & Baking Technology, Diploma- HumanResource Management, HolisticSpirituality, HotelManagement, InternationalRelations, ProjectManagement, Sports Management, Fashion Designing, CyberSecurity, HRAnalytics, PGDiploma – HolisticSpirituality, BusinessAnalytics, DataScience, CertificateCourses- FunctionalEnglish, FunctionalKannada, FunctionalHindi, HolisticSpirituality, French, FashionDesigning, Advanced Diploma –SportsManagement. |
| 5 | ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು–570012 | BA, B.Sc, B.Com, BBA, BCA | BA, B.Sc, B.Com, BBA, BCA, BBA-Hotel Hospitality, Aviation & International Tourism P.G.- M.Com, MCA, MBA, Biotechnology, Microbiology, Biochemistry, Chemistry, MSW, Computer Science, MTTM. |

**II. 2026–27ನೇ ಶೈಕ್ಷಣಿಕ ಸಾಲಿಗೆ ಸ್ವಾಯತ್ತ ಕಾಲೇಜುಗಳ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಹೊಸ ಕೋರ್ಸ್/ ವಿಷಯಸಮೂಹ/ಹೊಸ ಭಾಷೆ/ಕಾಲೇಜಿನ ಹೆಸರು ಬದಲಾವಣೆಗೆ ಶಿಫಾರಸು ಮಾಡಿರುವ ವಿವರ**

**ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ:**

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸ್‌ಗಳು | ಕಾಂಬಿನೇಷನ್ | ಹಾಲಿ ಇರುವ ಪ್ರವೇಶಾತಿ ಸಂಖ್ಯೆ | ಸಮಿತಿ ಹೆಚ್ಚುವರಿ ಮಂಜೂರು ಮಾಡಿರುವ ಪ್ರವೇಶಾತಿ ಸಂಖ್ಯೆ |
|---|---|---|---|---|---|
| 1. | ಸಂತ ಫಿಲೋಮಿನಾಸ್ ಕಾಲೇಜು, ಬನ್ನಿಮಂಟಪ ಬಡಾವಣೆ. ಮೈಸೂರು–570015 | BBA | – | 120 | 60 |
| 2. | ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು–570012 | B.Sc | Criminology & Forensic Science, Psycology Biochemistry | 80 | 100 |
| | | BCA | - | 420 | 60 |
| | | BBA | Hotel & Hospitality | 60 | 60 |
| | | BBA | Aviation & International Tourism | 60 | 60 |
| | | MBA | - | 120 | 60 |

**2. ಹೊಸ ಕೋರ್ಸು/ಕಾಂಬಿನೇಷನ್/ಭಾಷೆ:**

| ಕ್ರ. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಪ್ರವೇಶಾತಿ ಸಂ |
|---|---|---|---|---|
| 1. | ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು–570012 | B.Sc | BTMCs | [illegible] |
| 2. | ಜೆ.ಎಸ್.ಎಸ್. ಕಲಾ, ವಿಜ್ಞಾನ & ವಾಣಿಜ್ಯ ಕಾಲೇಜು, ಬಿ.ಎನ್. ರಸ್ತೆ, ಮೈಸೂರು–570025 | M.Sc | Data Science | 30 |
| | | | Artificial Intelligence | 30 |
| | | | Machine Learning | 30 |

**ಸ್ವಾಯತ್ತ ಕಾಲೇಜುಗಳಿಂದ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಪ್ರಮಾಣ ಕಡಿತಗೊಳಿಸುವ/ ಸ್ಥಗಿತಗೊಳಿಸುವ ಬಗ್ಗೆ ಕಾಲೇಜಿನ ವತಿಯಿಂದ ಪತ್ರ ನೀಡಿದಲ್ಲಿ ಈ ಸಂಬಂಧ ವಿಶ್ವವಿದ್ಯಾನಿಲಯವು ಕ್ರಮ ವಹಿಸಲಾಗುತ್ತದೆ.**

**ಈ ಸಂಬಂಧ ಸಮಿತಿ ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ತರಲಾಗಿದೆ ಎಂದು ತಿಳಿಸಿದರು.**

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, 2026–27ನೇ ಶೈಕ್ಷಣಿಕ ಸಾಲಿನ ಸ್ಥಳೀಯ ವಿಚಾರಣಾ ಸಮಿತಿ ನೀಡಿರುವ ವರದಿಗೆ ತಮ್ಮ ಆಕ್ಷೇಪಣೆಯಿದೆಯೆಂದು ತಿಳಿಸಿದರು. ಏಕೆಂದರೆ ವಿಚಾರಣಾ ಸಮಿತಿಯಲ್ಲಿ ಒಬ್ಬ ಸಿಂಡಿಕೇಟ್ ಸದಸ್ಯರನ್ನೂ ಸಹ ನಾಮನಿರ್ದೇಶನ ಮಾಡಿರುವುದಿಲ್ಲ, ಸಿಂಡಿಕೇಟ್‌ನ ಅನುಮೋದನೆಯೊಂದಿಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿರುವುದಿಲ್ಲ. ಸದರಿ ವರದಿಯನ್ನು ಏಳು ದಿನಗಳ ಮೊದಲೇ ನೀಡಿದ್ದರೆ ವರದಿಯನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಅನುಕೂಲವಾಗುತ್ತಿತ್ತೆಂದು ತಿಳಿಸುತ್ತಾ, ಅಸಮ್ಮತಿ ಪತ್ರವನ್ನು ಸಲ್ಲಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಆದೇಶದಂತೆ 2026–27ನೇ ಶೈಕ್ಷಣಿಕ ಸಾಲಿನ ಸ್ಥಳೀಯ ವಿಚಾರಣಾ ಸಮಿತಿ ರಚಿಸಲಾಗಿದೆ ಹಾಗೂ ಆನ್‌ಲೈನ್‌ನಲ್ಲಿ ಪ್ರಕ್ರಿಯೆಗಳು ಜರುಗುವುದೆಂದು ಸ್ಪಷ್ಟಪಡಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನ ಅಧ್ಯಾಪಕರು ಎಷ್ಟು ಪುಸ್ತಕಗಳನ್ನಾಗಲಿ ಮತ್ತು ಲೇಖನಗಳನ್ನಾಗಲಿ ಬರೆದಿರುವ ಬಗ್ಗೆ ಮಾಹಿತಿಗಳಿಲ್ಲ. ಆದ್ದರಿಂದ ಈ ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜಿಗೆ ಹೇಗೆ ಅನುಮೋದನೆ ನೀಡಲು ಸಾಧ್ಯವೆಂದು ಕೇಳಿದರು.

ಡಾ. ಮಂಟೇಲಿಂಗುರವರು ಮಾತನಾಡಿ, ಪ್ರಾಂಶುಪಾಲರು, ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರು ಕಾಲೇಜಿನ ಬಗೆಗಿನ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಿರುವುದರಿಂದ, ನಮಗೆ ಬೇರೆ ಯಾವ ಮಾಹಿತಿಗಳು ಲಭ್ಯವಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜು ಸಿ.ರವರು ಮಾತನಾಡಿ, ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು ಇಲ್ಲಿ ಪರೀಕ್ಷೆ ಒಂದು ತಿಂಗಳು ಇರುವಾಗಲೂ ಸಹ ಪ್ರವೇಶಾತಿ ನೀಡುತ್ತಿರುವುದು ಗಮನಕ್ಕೆ ಬಂದಿರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಾಹಿತಿ ಈ ಮೊದಲೇ ನೀಡಿದ್ದರೆ ಕ್ರಮ ಕೈಗೊಳ್ಳಬಹುದಾಗಿತ್ತು ಹಾಗೂ ಸಂಯೋಜನೆ ಕುರಿತು ಕಾಲೇಜಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳು ಸಹ ಪ್ರಾಂಶುಪಾಲರು ಆನ್‌ಲೈನ್‌ನಲ್ಲಿ ನಮೂದಿಸಿರುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಮೂರು ಅಂಶಗಳನ್ನು ಮಾತ್ರ ನಮೂದಿಸಲು ಅವಕಾಶ ನೀಡಿರುತ್ತಾರೆ, ಉಳಿದ ಅಂಶಗಳನ್ನು ನಮೂದಿಸಲು ವಿಶ್ವವಿದ್ಯಾನಿಲಯಕ್ಕೆ ಅವಕಾಶವಿರುವುದಿಲ್ಲ, ಕಾಲೇಜು ನೀಡುವ ಡೇಟಾವನ್ನು ಸರ್ಕಾರ ಗಮನಿಸಿ ಅನುಮೋದನೆ ನೀಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸಂಯೋಜನೆ ಪಡೆದಿರುವ ಕಾಲೇಜುಗಳಲ್ಲಿ ಎರಡು ಹಾಜರಾತಿ ಪುಸ್ತಕಗಳು ನಿರ್ವಹಣೆ ಮಾಡಲಾಗುತ್ತಿದೆ ಎಂಬ ಮಾಹಿತಿ ಬಂದಿರುವುದಾಗಿ ತಿಳಿಸಿದರು. ವಿದ್ಯಾರ್ಥಿಗಳು ಹಾಜರಾತಿ ಪಡೆಯುವುದಕ್ಕೆ ವಿದ್ಯಾರ್ಥಿಗಳಿಂದ ಇಪತ್ತೈದು ಸಾವಿರದಿಂದ ಐವತ್ತು ಸಾವಿರದವರೆಗೆ ಶುಲ್ಕ ಪಾವತಿಸಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಇದೆ. ಸಂಯೋಜನಾ ಸಮಿತಿಗಳು ಇದರ ಬಗ್ಗೆ ಪರಿಶೀಲಿಸಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರ ಬಗ್ಗೆ ಕಳೆದ ಸಭೆಯಲ್ಲಿ ಮಾತನಾಡಿರುತ್ತೇವೆ. ಸದರಿ ವಿಷಯದ ಬಗ್ಗೆ ಸಮಿತಿ ರಚಿಸುವುದಾಗಿ ಅಧ್ಯಕ್ಷರು ತಿಳಿಸಿರುತ್ತಾರೆ. ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರವೇಶಾತಿ ಮತ್ತು ಹಾಜರಾತಿ ನೀಡುವುದು ಸಂಪೂರ್ಣವಾಗಿ ವ್ಯವಹಾರಿಕವಾಗಿ ಕೂಡಿರುತ್ತದೆ ಎಂದು ತಿಳಿಸಿದರು.

ಜಂಟಿ ನಿರ್ದೇಶಕರು ಮಾತನಾಡಿ, ಸಂಯೋಜನೆ ನೀಡುವಾಗ ಸರ್ಕಾರವು ಮೂರು ಅಂಶಗಳ ನ್ಯೂನತೆಯನ್ನು ನಮೂದು ಮಾಡಲು ಅವಕಾಶವಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯೇ ಕ್ಷೀಣಿಸುತ್ತಿರುವ ಕಾರಣ ಸರ್ಕಾರ ಯಾವುದಕ್ಕೆ ಮಾನ್ಯತೆ ನೀಡಬೇಕು ಅಷ್ಟಕ್ಕೆ ಮಾತ್ರ ಮಾನ್ಯತೆ ನೀಡುತ್ತಿದೆ ಎಂದು ತಿಳಿಸಿದರು.

ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ಪ್ರಾಂಶುಪಾಲರು ತಮಗೆ ತೋಚಿದ ರೀತಿಯಲ್ಲಿ ಕಾಲೇಜಿನ ಮಾಹಿತಿಯನ್ನು ನೀಡುವುದಕ್ಕೆ ಸಾಧ್ಯವಿಲ್ಲ ಹಾಗೂ ಸಂಯೋಜನಾ ಸಮಿತಿ ಕೂಡ ಕಾಲೇಜಿನ ಮಾಹಿತಿಯನ್ನು ಗಮನಿಸದೆ ಸಂಯೋಜನೆ ನೀಡಬಹುದು ಎಂದು ತಿಳಿಸುವುದಿಲ್ಲ, ಸಂಯೋಜನಾ ಸಮಿತಿಯವರು ಕಾಲೇಜಿನವರು ನೀಡುವಂತಹ ಪಿಪಿಟಿ ಮತ್ತು ಛಾಯಚಿತ್ರಗಳನ್ನು ಗಮನಿಸಿಯೇ ಸಂಯೋಜನ ವರದಿಯನ್ನು ಸಲ್ಲಿಸುತ್ತದೆ. ಈ ವರದಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಮೂರು ಅಂಶಗಳ ನ್ಯೂನತೆಯನ್ನು ನಮೂದು ಮಾಡಲು ಅವಕಾಶವಿರುತ್ತದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರು ಯಾವ ವಿಷಯದ ಬಗ್ಗೆ ಚರ್ಚಿಸುತ್ತಿರುವುದಾಗಿ ನಿಖರವಾಗಿ ತಿಳಿಸಿದ್ದಲ್ಲಿ ಹಾಗೂ ಮಾಹಿತಿ ನೀಡಿದಲ್ಲಿ ಕ್ರಮವಹಿಸಬಹುದಾಗಿರುತ್ತದೆ, ಮೌಖಿಕವಾಗಿ ತಿಳಿಸಿದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಅನುದಾನರಹಿತ ಕಾಲೇಜುಗಳಲ್ಲಿ ನಡೆಯುತ್ತಿರುವ ಎರಡು ಹಾಜರಾತಿ ನಿರ್ವಹಣೆ ಬಗ್ಗೆ ಹಾಗೂ ಇತರೆ ಅನೇಕ ಸಮಸ್ಯೆಗಳನ್ನು ಯಾರು ನೋಡಿಕೊಳ್ಳುವವರು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಅನುದಾನರಹಿತ ಕಾಲೇಜುಗಳಲ್ಲಿ ನಡೆಯುತ್ತಿರುವ ಎರಡು ಹಾಜರಾತಿ ನಿರ್ವಹಣೆ ಬಗ್ಗೆ ಹಾಗೂ ಇತರೆ ಸಮಸ್ಯೆಗಳ ಕುರಿತು ಸಾಕ್ಷಿ ಸಮೇತ ಮಾಹಿತಿ ನೀಡಿದಲ್ಲಿ, ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಯುಯುಸಿಎಂಎಸ್‌ನಲ್ಲಿ ವಿಶ್ವವಿದ್ಯಾನಿಲಯದ ಪಾತ್ರವೇನು ಇರುವುದಿಲ್ಲ ಎಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಕಾಲೇಜುಗಳ ಸಂಯೋಜನೆಯ ಕುರಿತು ನಿಖರವಾಗಿ ಪರಿಶೀಲಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಕಾಲೇಜುಗಳ ಸಮಸ್ಯೆಗಳನ್ನು ಕಾಲೇಜು ಅಭಿವೃದ್ಧಿ ಮಂಡಳಿಯವರು ಕೂಲಂಕಷವಾಗಿ ಪರಿಶೀಲಿಸುವುದರಿಂದ ಪರಿಹರಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯಲ್ಲಿ ಸಲಹಾ ಸಮಿತಿ ಇದೆ, ಕೂಡಲೇ ಸಲಹಾ ಸಮಿತಿ ಸಭೆಯನ್ನು ಏರ್ಪಡಿಸಿ, ಕಾಲೇಜುಗಳಿಗೆ ಸಂಯೋಜನೆ ನೀಡುವಾಗ ಯಾವ ಯಾವ ಮಾಹಿತಿಯನ್ನು ಕಾಲೇಜಿನ ಪ್ರಾಂಶುಪಾಲರಿಂದ ಪಡೆಯಬೇಕು ಎಂಬುದರ ಕುರಿತು ಚರ್ಚಿಸಿ ಎಂದು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರವರಿಗೆ ನಿರ್ದೇಶಿಸಿದರು.

| | |
|---|---|
| | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, 2025–26ನೇ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನೀಡಲಾದ ಸಲಹೆಗಳನ್ನು ಪ್ರಸ್ತುತ ಸಂಯೋಜನಾ ಸಮಿತಿಯು ಅಳವಡಿಸಿಕೊಳ್ಳಬೇಕಾಗಿತ್ತು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನೀಡಲಾದ ಸಲಹಗಳನ್ನು ಸಂಯೋಜನಾ ಸಮಿತಿ ಅಳವಡಿಸಿಕೊಂಡಿರುತ್ತದೆ ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ರವರು ಮಾತನಾಡಿ, ಕಾಲೇಜುಗಳ ಪ್ರಾಂಶುಪಾಲರ ಸೇವೆಯನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ, ಹಾಗೂ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರೊಂದಿಗೆ ಸಮನ್ವಯ ನಡೆಸಿ ಸಂಯೋಜನಾ ಕಾಲೇಜುಗಳ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ಕಲೆ ಹಾಕುತ್ತಿಲ್ಲ, ಆ ಕಾರ್ಯವು ಸಮರ್ಪರ್ಕವಾಗಿ ನಡೆಯಬೇಕಾಗಿದೆ. ಕೆಲವು ಮ್ಯಾನೇಜ್‌ಮೆಂಟ್‌ಗಳು ವಿಶ್ವವಿದ್ಯಾನಿಲಯದಿಂದ ನಾಮನಿರ್ದೇಶನರಾಗುವ ಪ್ರಾಂಶುಪಾಲರನ್ನು ಆಹ್ವಾನಿಸುವುದಿಲ್ಲ. ಇಂತಹ ಸಮಸ್ಯೆಗಳೆಲ್ಲವನ್ನು ಸರಿಪಡಿಸುವುದರಿಂದ ಸಮಸ್ಯೆಗಳನ್ನು ಸುಧಾರಿಸಲು ಅಥವಾ ಪರಿಹರಿಸಲು ಸಾಧ್ಯ. ಜೊತೆಗೆ ಪ್ರತಿ ಎರಡು ತಿಂಗಳಿಗೊಮ್ಮೆ ಪ್ರಾಂಶುಪಾಲರಿಂದ ಕಾಲೇಜುಗಳ ಮಾಹಿತಿ ಪಡೆಯಬೇಕು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ, ಪ್ರಾಂಶುಪಾಲರಿಂದ ಕಾಲೇಜುಗಳ ಮಾಹಿತಿ ಪಡೆಯುತ್ತದೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯವು ಕಾಲೇಜಿನ ಪ್ರಾಂಶುಪಾಲರಿಗೆ ಸರಿಯಾದ ಮಾಹಿತಿ ನೀಡಬೇಕು ಅಥವಾ ಕಾಲೇಜಿಗೆ ಷರತ್ತು ವಿಧಿಸಬಹುದು. ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾರ್ಥಿ/ವಿದ್ಯಾರ್ಥಿನಿಯರಿದ್ದಾರೆಂಬ ಮಾಹಿತಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಯ ಮಾಹಿತಿಯನ್ನು ಕುಲಸಚಿವರ ಮತ್ತು ಮಾನ್ಯ ಕುಲಪತಿಗಳ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದರು. ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 80 ಸಂಯೋಜಿತ ಪ್ರಥಮ ದರ್ಜೆ ಕಾಲೇಜು, 15 ಬಿಎಡ್ ಕಾಲೇಜು, 5 ಸ್ವಾಯತ್ತ ಕಾಲೇಜು, 03 ಘಟಕ ಕಾಲೇಜುಗಳು ಒಟ್ಟು 103 ಕಾಲೇಜುಗಳ ಲಭ್ಯತೆಯನ್ನು ತಿಳಿಸಲಾಗಿದೆ. ಕಾಲೇಜುಗಳ ಮತ್ತು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಯನ್ನು ವೆಬ್‌ಸೈಟ್‌ನಲ್ಲಿ ನವೀಕರಿಸಬೇಕೆಂದು ತಿಳಿಸಿದರು. ಸದರಿ ವಿಷಯಕ್ಕೆ ಕುಲಸಚಿವರು ದನಿಗೂಡಿಸಿದರು.<br><br>ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಸಂಯೋಜನ ವರದಿ ನೀಡಿರುವ ಸದಸ್ಯರುಗಳ ಮಾಹಿತಿ ನೀಡುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳನ್ನು ಸಂಯೋಜನ ಸಮಿತಿಗೆ ನಿಯೋಜಿಸಲಾಗಿದೆ ಎಂದು ತಿಳಿಸುತ್ತಾ, ಮಾಹಿತಿ ನೀಡುವುದಾಗಿ ತಿಳಿಸಿದರು.<br><br>ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ಸ್ನಾತಕ ಕಾಲೇಜುಗಳಿಗೆ ಪಠ್ಯಕ್ರಮಗಳನ್ನು ಸಿದ್ಧಪಡಿಸುತ್ತಿರುವುದು ಸ್ನಾತಕೋತ್ತರ ಕಾಲೇಜುಗಳ ಅಧ್ಯಾಪಕರೆಂದು ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, ಪದವಿ ಕಾಲೇಜುಗಳ ಅಧ್ಯಾಪಕರುಗಳೇ ಪಠ್ಯಕ್ರಮಗಳನ್ನು ಸಿದ್ಧಪಡಿಸುತ್ತಿರುವುದಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸ್ನಾತಕೋತ್ತರ ವಿಭಾಗದ ಅಧ್ಯಾಪಕರು ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಪದವಿ ಕಾಲೇಜಿನ ಅಧ್ಯಾಪಕರುಗಳೇ ಸ್ನಾತಕ ಅಧ್ಯಯನ ಮಂಡಳಿಯ ಸದಸ್ಯರುಗಳನ್ನಾಗಿ ನಾಮನಿರ್ದೇಶನಗೊಳಿಸಲಾಗಿದೆಯೆಂದು ತಿಳಿಸಿದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪರೀಕ್ಷಾ ಮೇಲ್ವಿಚಾರಣೆ ಸಂಬಂಧ ಪರಿವೀಕ್ಷಕರನ್ನಾಗಿ ನೇಮಿಸುವ ರೀತಿಯಲ್ಲಿಯೇ (ಸ್ಕ್ವಾಡ್) ಕಾಲೇಜು ಅಭಿವೃದ್ಧಿ ಮಂಡಳಿಯ |

ವತಿಯಿಂದಲೂ ಸಹ ಸಂಯೋಜನೆಯನ್ನು ನೀಡುವ/ಮುಂದುವರೆಸುವ ಕ್ರಮಗಳನ್ನು ಅನುಸರಿಸಲು ಪರೀವೀಕ್ಷಣಾ ಸಮಿತಿಯನ್ನು ರಚಿಸುವುದು ಸೂಕ್ತವೆಂದು ಸಲಹೆ ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯಿಂದ ನಿರ್ದೇಶಕರು ಕಾಲೇಜುಗಳಿಗೆ ಹೋಗಿ ಪರಿಶೀಲಿಸಬಹುದಾಗಿದೆ, ಸರ್ಕಾರಿ ಕಾಲೇಜುಗಳಾದರೆ ಜಂಟಿ ನಿರ್ದೇಶಕರೊಂದಿಗೆ ಕಾಲೇಜಿಗೆ ಭೇಟಿ ನೀಡಬಹುದೆಂದು ತಿಳಿಸುತ್ತಾ, ಪ್ರತ್ಯೇಕವಾಗಿ ಪರಿವೀಕ್ಷಣಾ ಸಮಿತಿಯನ್ನು ರಚಿಸುವ ಅವಶ್ಯಕತೆಯಿಲ್ಲವೆಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸ್ನಾತಕ ಕಾಲೇಜುಗಳಲ್ಲಿ ನಡೆಯುವ ಪರೀಕ್ಷೆ ಸಮಯದಲ್ಲಿ ಸ್ಕ್ವಾಡ್ ರಚಿಸುವುದು ಸೂಕ್ತ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸ್ನಾತಕ ಕಾಲೇಜುಗಳಲ್ಲಿ ನಡೆಯುವ ಪರೀಕ್ಷೆ ಸಮಯದಲ್ಲಿ ಸ್ಕ್ವಾಡ್ ರಚಿಸಲಾಗಿರುತ್ತದೆ ಎಂದು ತಿಳಿಸಿದರು.

ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ವಿಶ್ವವಿದ್ಯಾನಿಲಯ ಅಕಾಡೆಮಿಕ್ ಕ್ಯಾಲೆಂಡರ್ ತಯಾರಿಸುವಾಗ ಅಧ್ಯಾಪಕರುಗಳಿಗೆ ರಜೆ ಇದ್ದಂತಹ ಸಂದರ್ಭದಲ್ಲಿಯೇ ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು ರಜಾ ಅವಧಿಯೊಳಗೆ ಪೂರ್ಣಗೊಳಿಸುವುದು ಸೂಕ್ತವೆಂದು ಹಾಗೂ ರಜಾ ಅವಧಿ ಮುಗಿದ ನಂತರ ಮೌಲ್ಯಮಾಪನ ಕಾರ್ಯವನ್ನು ನಡೆಸಿದರೆ, ಕಾಲೇಜುಗಳಲ್ಲಿನ ಬೋಧನಾ ತರಗತಿಗೆ ಬಹಳಷ್ಟು ತೊಂದರೆಯಾಗುತ್ತದೆ. ಈ ಹಿನ್ನೆಯೆಲಯಲ್ಲಿ ರಜಾ ಅವಧಿಯಲ್ಲಿಯೇ ಮೌಲ್ಯಮಾಪನ ಕಾರ್ಯವನ್ನೂ ಪೂರ್ಣಗೊಳಿಸುವಂತೆ ಹಾಗೂ ಮೌಲ್ಯಮಾಪನ ಕಾರ್ಯಕ್ಕೆ ಸ್ವಾಯತ್ತ ಕಾಲೇಜಿನ ಅಧ್ಯಾಪಕರುಗಳನ್ನು ಬಳಸಿಕೊಳ್ಳುವಂತೆ ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಸ್ವಾಯತ್ತತಾ ಕಾಲೇಜಿನ ಅಧ್ಯಾಪಕರುಗಳನ್ನು ಸಹ ಮೌಲ್ಯಮಾಪನ ಕಾರ್ಯಕ್ಕೆ ಬಳಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿನ Forensic Science ಪ್ರೋಗ್ರಾಂಗೆ ವಿದ್ಯಾರ್ಥಿಗಳು ಪ್ರವೇಶಾತಿ ಕಡಿಮೆಯಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆದುಕೊಂಡಿರುವ ಸೆಂಟ್‌ಫಿಲೋಮಿನಾಸ್ ಕಾಲೇಜು ಮತ್ತು ಮಹಾಜನ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿರುತ್ತಾರೆಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, Forensic Science ಪ್ರೋಗ್ರಾಂಗೆ ನಮ್ಮ ವಿಶ್ವವಿದ್ಯಾನಿಲಯ ದಲ್ಲಿಯೂ ಸಹ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿದ್ದಾರೆಂದು ಹಾಗೂ Forensic Scienceನಲ್ಲಿ ಖಾಯಂ ಅಧ್ಯಾಪಕರಿರುವುದಿಲ್ಲ. ಆದ್ದರಿಂದ ಗುಣಮಟ್ಟ ಕಡಿಮೆಯಾಗಿದೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯು ಪ್ರಾರಂಭದಲ್ಲಿದ್ದ ಸಂಖ್ಯೆಗಿಂತ ಇಳಿಮುಖವಾಗಿದೆ. ಆದರೆ ವಿಶ್ವವಿದ್ಯಾನಿಲಯದ ಪಕ್ಕದಲ್ಲಿರುವ ಜಯಚಾಮರಾಜೇಂದ್ರ ಯೋಜನೆ ಮತ್ತು ಆರ್ಕಿಟೆಕ್ಚರ್ ಕೇಂದ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆಯೆಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವತಿಯಿಂದ ಖಾಸಗಿ ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರಕ್ಕೆ ಅನುಮೋದನೆ ನೀಡಲಾಗಿದ್ದು, ಸದರಿ ಕಾಲೇಜುಗಳಲ್ಲಿ ಸಂಶೋಧನೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿರುವರೇ ಎಂಬುದನ್ನು ವಿಶ್ವವಿದ್ಯಾನಿಲಯವು ಪರಿಶೀಲಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಖಾಸಗಿ ಕಾಲೇಜುಗಳಿಗೆ ಸಂಶೋಧನಾ ಕೇಂದ್ರವನ್ನಾಗಿ

| | |
|---|---|
| | ಮಾನ್ಯತೆಯನ್ನು ನೀಡುವ ಸಂದರ್ಭದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟ ಮಾರ್ಗದರ್ಶಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಸಂಬಂಧಪಟ್ಟ ವಿಷಯದ ಅಧ್ಯಯನ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಮಾಹಿತಿಯನ್ನು ಪರಿಶೀಲಿಸುವ ಜವಾಬ್ದಾರಿ [illegible]ರ್ಗ ಅಧ್ಯಯನ ಮಂಡಳಿಯವರದ್ದಾಗಿರುತ್ತದೆ ಎಂದು ತಿಳಿಸಿದರು. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59 ಮತ್ತು 64ರ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಕಾಲೇಜುಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ಸಲ್ಲಿಸಿರುವ ಸಂಯೋಜನಾ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅನುಮೋದಿಸಿದ ಸಿಂಡಿಕೇಟ್ ಸಭೆಯು ರಾಜ್ಯ ಸರ್ಕಾರದ ಅನುಮೋದನೆಗೆ ಕಳುಹಿಸಿ ಕೊಡಲು ತೀರ್ಮಾನಿಸಿತು.** |
| ವಿಶೇಷ ಸಭೆ 2026/2.3 | 2025-26ನೇ ಶೈಕ್ಷಣಿಕ ಸಾಲಿನಿಂದ ಯುವರಾಜ ಕಾಲೇಜಿನ ಸ್ವಾಯತ್ತತೆಯನ್ನು ಹಿಂಪಡೆಯುವಂತೆ ಕೋರಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಯುವರಾಜ ಕಾಲೇಜು 2005-06 ರಿಂದ ಸ್ವಾಯತ್ತ ಕಾಲೇಜಾಗಿ ಮುಂದುವರೆದಿರುತ್ತದೆ, 2024-25ನೇ ಶೈಕ್ಷಣಿಕ ಸಾಲಿನವರೆಗೆ ಸ್ವಾಯತ್ತತೆಯನ್ನು ಮುಂದುವರೆಸಿದ್ದು, ಯುವರಾಜ ಕಾಲೇಜು ಸ್ವಾಯತ್ತತೆಗೊಂಡ ಸಂದರ್ಭದಲ್ಲಿ ನೂರಕ್ಕೂ ಹೆಚ್ಚು ಖಾಯಂ ಅಧ್ಯಾಪಕರುಗಳು ಇದ್ದುದರಿಂದ, ಶೈಕ್ಷಣಿಕ ಸ್ವಾಯತ್ತತೆಯನ್ನು ಮುಂದುವರೆಸಲಾಗಿತ್ತು. ಪ್ರಸ್ತುತ ಕೇವಲ 36 ಖಾಯಂ ಅಧ್ಯಾಪಕರುಗಳು ಸದರಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2026ನೇ ಸಾಲಿನಲ್ಲಿ 06 ಪ್ರಾಧ್ಯಾಪಕರು ಸೇರಿದಂತೆ ಮುಂದಿನ ಕೆಲವೇ ವರ್ಷಗಳಲ್ಲಿ ಬಹುಪಾಲು ಖಾಯಂ ಅಧ್ಯಾಪಕರುಗಳು ವಯೋನಿವೃತ್ತಿ ಹೊಂದಲಿರುವುದರಿಂದ, ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿ ಸಭೆಯನ್ನು ನಡೆಸಲು ಕಷ್ಟಸಾಧ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯುವರಾಜ ಕಾಲೇಜಿಗೆ ನೀಡಿರುವ ಶೈಕ್ಷಣಿಕ ಸ್ವಾಯತ್ತತೆಯನ್ನು ಪ್ರಸಕ್ತ 2025-26ನೇ ಸಾಲಿನಿಂದ ಅನ್ವಯವಾಗುವಂತೆ ಹಿಂಪಡೆದು, ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ (Constituent College) ಮಾರ್ಪಡಿಸಬೇಕೆಂದು ಕೋರಿ ಯುವರಾಜ ಕಾಲೇಜಿನ ಪ್ರಾಂಶುಪಾಲರು ಹಾಗೂ ಖಾಯಂ ಅಧ್ಯಾಪಕರುಗಳು ಮನವಿ ಸಲ್ಲಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಸಾಕಷ್ಟು ಸಮಸ್ಯೆಗಳು ಇವೆ, ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ, ಖಾಯಂ ಅಧ್ಯಾಪಕರುಗಳ ಕೊರತೆ ಇಂತಹ ಹಲವು ಸಮಸ್ಯೆಗಳಿಂದ ಕೂಡಿರುವ ಯುವರಾಜ ಕಾಲೇಜನ್ನು ಅಲ್ಲಿಯ ಪ್ರಾಂಶುಪಾಲರು ಹಾಗೂ ಖಾಯಂ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಮಾರ್ಪಡಿಸಬೇಕೆಂದು ತಿಳಿಸಿರುತ್ತಾರೆ. ಸ್ವಾಯತ್ತ ಸಮಯದಲ್ಲಿ ನಡೆಯುತ್ತಿರುವ ವಿಚಾರಣೆಗಳು ಮುಂದುವರೆಯುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಸಾರ್ವಜನಿಕ ಹಿತದೃಷ್ಟಿಯಿಂದ, ವಿಶ್ವವಿದ್ಯಾನಿಲಯದ ಆಡಳಿತದ ಹಿತದೃಷ್ಟಿಯಿಂದ, ಯುವರಾಜ ಕಾಲೇಜನ್ನು ಸ್ವಾಯತ್ತ ಕಾಲೇಜಿನಿಂದ ಘಟಕ ಕಾಲೇಜಾಗಿ ಮಾರ್ಪಡಿಸುವುದಕ್ಕೆ ಅನುಮತಿ ಕೋರಿರುತ್ತಾರೆ ಎಂದು ತಿಳಿಸಿದರು. |
| ತೀರ್ಮಾನ | **2025-26ನೇ ಶೈಕ್ಷಣಿಕ ಸಾಲಿನಿಂದ ಯುವರಾಜ ಕಾಲೇಜಿನ ಸ್ವಾಯತ್ತತೆಯನ್ನು ಹಿಂಪಡೆಯುವಂತೆ ಕೋರಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

**ಇತರೆ ವಿಷಯಗಳು:**

1. ಶ್ರೀ ಎಂ. ಶಂಕರರವರು ಮಾತನಾಡಿ, ಯುವರಾಜ ಕಾಲೇಜಿನ 45 ಅಧ್ಯಾಪಕೇತರ ಉದ್ಯೋಗಿಗಳನ್ನು ಕರ್ತವ್ಯದಿಂದ ವಜಾ ಮಾಡಿದ್ದು ಅವರ ಪರಿಸ್ಥಿತಿಯೇನು ಎಂದು ಕೇಳಿದರು.

2. ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಯಾವುದೇ ಪೂರ್ವಾನುಮತಿ ಪಡೆಯದೆ ಯುವರಾಜ ಕಾಲೇಜಿನ ಪ್ರಾಂಶುಪಾಲರೇ ನೇರವಾಗಿ 2014ರಲ್ಲಿ ಅಧ್ಯಾಪಕೇತರ ಉದ್ಯೋಗಿಗಳನ್ನು ಕರ್ತವ್ಯಕ್ಕೆ ನೇಮಕಾತಿ ಮಾಡಿಕೊಂಡಿರುತ್ತಾರೆ ಹಾಗೂ ಯುವರಾಜ ಕಾಲೇಜಿನ ಮಾಹಿತಿ ಪರಿಶೀಲಿಸಿದಾಗ,

ಯುವರಾಜ ಕಾಲೇಜಿಗೆ ಮಂಜೂರಾಗದೇ ಇರುವ ಹುದ್ದೆಗಳಿಗೂ ಸಹ ಪ್ರಾಂಶುಪಾಲರು ಅಧ್ಯಾಪಕೇತರರನ್ನು ಕಾಲೇಜಿನ ವತಿಯಿಂದಲೇ ನೇರವಾಗಿ ನೇಮಕಾತಿ ಮಾಡಿಕೊಂಡಿರುತ್ತಾರೆ. ಆದರೆ ನಿಯಮಗಳನ್ವಯ ಕಾಲೇಜಿನ ಪ್ರಾಂಶುಪಾರಲು ಯಾವುದೇ ರೀತಿಯ ನೇಮಕಾತಿ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ. ಆದರೆ ಅವರು ತಾತ್ಕಾಲಿಕ ನೌಕರರನ್ನು ಮುಂದುವರೆಸಿಕೊಂಡು ಬಂದಿರುವುದರಿಂದ ಪ್ರಸ್ತುತ ಯುವರಾಜ ಕಾಲೇಜಿನಲ್ಲಿರುವ 45 ತಾತ್ಕಾಲಿಕ ಅಧ್ಯಾಪಕೇತರರನ್ನು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ 45 ಮಂದಿ ತಾತ್ಕಾಲಿಕ ಅಧ್ಯಾಪಕೇತರರನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡಂತಹ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮಕೈಗೊಂಡಿರುವುದಿಲ್ಲವೇ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಪ್ರಾಂಶುಪಾಲರ ವಿರುದ್ಧ ನಿಯಮಗಳನ್ವಯ ಕ್ರಮಕೈಗೊಳ್ಳಲಾಗಿದ್ದು, ಆದರೆ ಅವರು ನ್ಯಾಯಾಲಯದ ಮೊರೆ ಹೋಗಿ ಖುಲಾಸೆ ಪಡೆದುಕೊಂಡು ಬಂದಿರುತ್ತಾರೆ ಹಾಗೂ ಸದರಿಯವರು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿಗೊಂಡಿರುತ್ತಾರೆ ಎಂದು ತಿಳಿಸಿದರು.

3. ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚುವರಿಯಾಗಿ ನೇಮಕಾತಿಗೊಂಡಿರುವ ತಾತ್ಕಾಲಿಕ ಅಧ್ಯಾಪಕೇತರರ ಉದ್ಯೋಗಿಗಳನ್ನು ತರ್ಕಬದ್ಧಗೊಳಿಸುವಂತೆ ತಿಳಸಲಾಗಿದೆ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹೆಚ್ಚುವರಿಯಾಗಿ ನೇಮಕಾತಿಗೊಂಡಿರುವ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳನ್ನು ಪ್ರತಿ ವರ್ಷ ತರ್ಕಬದ್ಧಗೊಳಿಸಿಕೊಂಡು ಬರಲಾಗುತ್ತಿದೆ ಈ ಹಿಂದೆ 1200 ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ ಸಾಲಿನಲ್ಲಿ 1000 ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಸರ್ಕಾರದ ಆದೇಶ ಸ್ಪಷ್ಟವಾಗಿಲ್ಲದ ಕಾರಣ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ ವಿರುದ್ಧ ಏಕಾಏಕಿ ಕ್ರಮಕೈಗೊಳ್ಳುವುದಕ್ಕೆ ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು.

4. ಶ್ರೀ ಕೆ. ಗೋಕುಲ್ ಗೋವರ್ಧನ್ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2026–27ನೇ ಸಾಲಿನ ಪ್ರವೇಶಾತಿ ಸಮಯ ಪ್ರಾರಂಭವಾಗುತ್ತದೆ, ಪ್ರವೇಶಾತಿ ನಡೆಯುವ ಮುನ್ನ ವಿಶ್ವವಿದ್ಯಾನಿಲಯದ ವಸತಿ ನಿಲಯಗಳಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಸತಿನಿಲಯದಲ್ಲಿ ಗಣನೀಯವಾಗಿ ವಿದ್ಯಾರ್ಥಿನಿಯರ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ವಸತಿನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಹೆಚ್ಚಾಗಿರುತ್ತದೆಂದು ತಿಳಿಸಿದರು.

5. ಶ್ರೀ ಮಹದೇಶುರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೆ ವಿದೇಶ ಪ್ರವಾಸ ಕೈಗೊಂಡಿರುತ್ತಾರೆ ಎಂಬ ಮಾಹಿತಿ ಇದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪೂರ್ವಾನುಮತಿ ಪಡೆಯದೆ ವಿದೇಶ ಪ್ರವಾಸ ಕೈಗೊಂಡಿರುವ ಪ್ರಾಧ್ಯಾಪಕರ ಮಾಹಿತಿಯನ್ನು ಪಡೆದು, ನಂತರ ನಿಯಮಗಳನ್ವಯ ಕ್ರಮಕೈಗೊಳ್ಳಲಾಗುವುದೆಂದು ಎಂದು ತಿಳಿಸಿದರು.

6. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಕಳೆದ ಸಭೆಯಲ್ಲಿ ಪ್ರೊ. ಹೆಚ್.ಎಸ್. ದೇವರಾಜೇಗೌಡರವರ ಚೆಕ್‌ಅನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬ ವಿಚಾರವಾಗಿ ಪ್ರಸ್ತಾಪಿಸಿರುತ್ತೇನೆ. ಸದರಿ ವಿಷಯದ ಬಗ್ಗೆ ಯಾವ ಕ್ರಮವಹಿಸಲಾಗಿದೆ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಯುವರಾಜ ಕಾಲೇಜಿನ ಪ್ರಾಂಶುಪಾಲರಿಗೆ ಮಾಹಿತಿ ಕೋರಿ ಪತ್ರ ಬರೆಯಲಾಗಿದೆಯೆಂದು ತಿಳಿಸಿದರು.

7. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಸಭೆಯಲ್ಲಿ ಯುವರಾಜ ಕಾಲೇಜಿನ ಆಡಿಟ್ ವಿಚಾರವಾಗಿ ಪ್ರಸ್ತಾಪಿಸಿರುತ್ತೇನೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಯುವರಾಜ ಕಾಲೇಜಿನ ಆಡಿಟ್ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

8. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಮಾನಸ ಅತಿಥಿಗೃಹದಲ್ಲಿ ವರ್ಷಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಆದಾಯವಿದ್ದು, ಅತಿಥಿಗೃಹಕ್ಕೆ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಮತ್ತು ನಿರ್ವಹಣೆ ಮಾಡದಿರುವುದು ಕಂಡು ಬಂದಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದ ಛಾಯಚಿತ್ರವನ್ನು ಸಹ ತಲುಪಿಸಲಾಗಿದೆ. ಕೂಡಲೇ ನಿರ್ವಹಣೆ ಬಗ್ಗೆ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗಕ್ಕೆ ಮಾಹಿತಿ ನೀಡಿದ್ದು, ಅತಿಥಿಗೃಹಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳು ಮತ್ತು ನಿರ್ವಹಣೆ ಕುರಿತು ಕ್ರಮಕೈಗೊಳ್ಳುವುದಕ್ಕೆ ತಿಳಿಸಿರುತ್ತೇನೆ ಎಂದು ತಿಳಿಸಿದರು.

9. ಡಾ. ಶಿಲ್ಪ ಜೆ.ರವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗನುಗುಣವಾಗಿ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈಗಾಗಲೇ ಪ್ರಸ್ತುತ ಇರುವ ಶೌಚಾಲಯಗಳನ್ನು ದುರಸ್ತಿಪಡಿಸಲಾಗಿದೆ ಎಂದು ತಿಳಿಸಿದರು.

10. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಯುವರಾಜ ಕಾಲೇಜಿನ ಆವರಣದಲ್ಲಿರುವ ಕ್ಯಾಂಟಿನ್, ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಕ್ಯಾಂಟಿನ್ ಟೆಂಡರ್ ಅವಧಿ ಮುಗಿದಿದ್ದು ಹೊಸ ಟೆಂಡರ್ ಆಹ್ವಾನಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕ್ಯಾಂಟಿನ್ ಸಂಬಂಧ ಟೆಂಡರ್ ಆಹ್ವಾನಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

11. ಕುಲಸಚಿವರು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಯೊಬ್ಬ ನನ್ನ ಕಛೇರಿಗೆ ಅನುಮತಿಯಿಲ್ಲದೆಯೇ ಏಕಾಏಕಿ ಕಚೇರಿಗೆ ಧಾವಿಸಿ ಏರುಧ್ವನಿಯಲ್ಲಿ ಮಾತನಾಡಿದ್ದು, ಅವರಿಗೆ ಹೊರಗೆ ಹೋಗುವಂತೆ

ತಿಳಿಸಿರುತ್ತೇನೆ. ವಿಶ್ವವಿದ್ಯಾನಿಲಯದಲ್ಲಿನ ಸಂಶೋಧನಾ ವಿದ್ಯಾರ್ಥಿಗಳು ಎಲ್ಲಿ ಹೇಗೆ ಮಾತನಾಡಬೇಕು ಎಂಬ ಸೌಜನ್ಯತೆ ಕೂಡ ಇಲ್ಲದಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳು ಗೌರವದಿಂದ ನಡೆದುಕೊಳ್ಳಬೇಕು ಹಾಗೂ ಮಾರ್ಗದರ್ಶಕರು ಅವರವರ ಸಂಶೋಧನಾ ವಿದ್ಯಾರ್ಥಿಗಳ ವರ್ತನೆ ಬಗ್ಗೆ ಗಮನಹರಿಸುವಂತೆ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಕುಲಸಚಿವರು (ಪರೀಕ್ಷಾಂಗ)ರವರಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

ಸದರಿ ವಿಷಯಕ್ಕೆ ಸಿಂಡಿಕೇಟ್ ಸದಸ್ಯರುಗಳೆಲ್ಲರೂ ಇಂತಹ ಸಂಸ್ಕೃತಿಗೆ ಕಡಿವಾಣ ಹಾಕುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಂಶೋಧನಾ ಶುಲ್ಕ ಪಾವತಿಸದಿರುವ ಸಂಶೋಧನಾ ವಿದ್ಯಾರ್ಥಿಗಳ ನೋಂದಣಿ ರದ್ದುಪಡಿಸಲಾಗುವುದೆಂದು ಹಾಗೂ ವಿದ್ಯಾರ್ಥಿನಿಲಯಗಳ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

12. ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಯಾವುದೇ ಕಾರ್ಯಕ್ರಮ ಕೈಗೊಳ್ಳುವ ಮೊದಲು ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆದು ಕಾರ್ಯಕ್ರಮ ಕೈಗೊಳ್ಳಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ವತಿಯಿಂದ ಪೂರ್ವಾನುಮತಿ ಪಡೆಯದೆಯೇ ಖಾಸಗಿ ವ್ಯಕ್ತಿಗಳು / ಸಂಸ್ಥೆಗಳು / ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಲಿ, ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ಉದ್ಯೋಗಿಗಳು ಯಾವುದೇ ಕಾರ್ಯಕ್ರಮವನ್ನು ಮಾನಸಗಂಗೋತ್ರಿಯ ಆವರಣದಲ್ಲಿ ಆಯೋಜಿಸಿದ್ದಲ್ಲಿ ಅದು ನಿಯಮಬಾಹಿರವಾಗಿರುತ್ತದೆ. ಅದಕ್ಕೆ ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರು ಮತ್ತು ಆಡಳಿತಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಿದರು.

13. ಶ್ರೀ ಮಹದೇಶುರವರು ಮಾತನಾಡಿ, ಪ್ರಿಮಿಯರ್ ಸ್ಟುಡಿಯೋ ಎದುರಿನ ಜಾಗದ ಕುರಿತು ಮಾಹಿತಿ ಲಭ್ಯವಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಪ್ರಿಮಿಯರ್ ಸ್ಟುಡಿಯೋ ಎದುರಿನ ಜಾಗದ ಕುರಿತು ಮಾಹಿತಿ ಸಂಗ್ರಹಿಸಿ ತಿಳಿಸುವುದಾಗಿ ತಿಳಿಸಿದರು.

14. ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಮಳಿಗೆಗಳ ಬೀಗ ಹೊಡೆದು ಮಳಿಗೆ ಪ್ರಾರಂಭ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಳಿಗೆದಾರರು ಬಾಡಿಗೆ ನೀಡದಿರುವ ಕುರಿತು ಮೂರು ನೋಟಿಸ್ ನೀಡಿರುತ್ತೇವೆ. ಯಾವ ಯಾವ ಮಳಿಗೆದಾರರು ಎಷ್ಟು ವರ್ಷಗಳಿಂದ ಬಾಡಿಗೆ ನೀಡಿಲ್ಲ ಎಂಬುದರು ಕುರಿತು ವರದಿ ನೀಡುವಂತೆ ತಿಳಿಸಿರುತ್ತೇನೆ. ವರದಿ ಬಂದ ತಕ್ಷಣ ಕಾನೂನಾತ್ಮಕವಾಗಿ ಕ್ರಮಕೈಗೊಳ್ಳಲಾಗುವುದೆಂದರು.

15. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೆಎಸ್‌ಓಯು ಆವರಣದಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಜಾಗದಲ್ಲಿ ಪೆಟ್ರೋಲ್ ಬಂಕ್‌ನ ಬಾಡಿಗೆ ನಿಗದಿಯಾಗಿದೆಯೇ ಎಂದು ಕೇಳಿದರು.

16. ಕುಲಸಚಿವರು ಮಾತನಾಡಿ, ಪೆಟ್ರೋಲ್‌ಬಂಕ್‌ನ ಮಾಲಿಕನಿಗೆ ಲೈಸೆನ್ಸ್ ಸಿಗುತ್ತಿಲ್ಲ. ಬಾಡಿಗೆಯನ್ನು ಸಹ ಕಟ್ಟಿರುವುದಿಲ್ಲ, ನಾವು ಇಂಡಿಯನ್ ಆಯಿಲ್ ಕಾರ್ಪೋರೇಷನ್‌ರವರನ್ನು ಸಂಪರ್ಕಿಸಿರುತ್ತೇವೆ. ಅವರು ಕಾಲಾವಕಾಶ ನೀಡಿ ಎಂದು ಕೋರಿರುತ್ತಾರೆ ಇದರ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

17. ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳು 5 ರಿಂದ 6 ವರ್ಷ ಸಂಶೋಧನೆ ಕೈಗೊಳ್ಳುತ್ತಾರೆ, ಸದರಿಯವರು ಎಷ್ಟು ವರ್ಷ ಸಂಶೋಧನೆ ಶುಲ್ಕ ಪಾವತಿಸಿರುತ್ತಾರೆ, ಮಾಸಿಕ, ವಾರ್ಷಿಕ, ಸಂಶೋಧನಾ ವರದಿಗಳನ್ನು ಪರಿಶೀಲಿಸಬೇಕೆಂದು ತಿಳಿಸಿದರು.

18. ಮಾನ್ಯ ಕುಲಪತಿಗಳು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳ ಮಾರ್ಗದರ್ಶಕರು ಅವರವರ ಸಂಶೋಧನಾ ವಿದ್ಯಾರ್ಥಿಗಳ ವಾರ್ಷಿಕ, ಮಾಸಿಕ ಸಂಶೋಧನಾ ವರದಿಗಳ ಕುರಿತು ಕಟ್ಟುನಿಟ್ಟಾಗಿ ಪರಿಶೀಲಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಹಾಗೂ ಅಧ್ಯಕ್ಷರು**